ಏನೋ... ಏಕೋ...

ಕೆಲ ಅತ್ಯಾವಶ್ಯಕ ಕೆಲಸಗಳಿಗಾಗಿ ನಾನು ತಕ್ಷಣವೇ ಊರು ಬಿಡಬೇಕಾಗಿ ಬಂದುದರಿಂದ ಕೆಲವು ದಿವಸಗಳು ಮನೆಯಲ್ಲಿರಲಿಲ್ಲ. ಮೂರು ನಾಲ್ಕು ಊರುಗಳಿಗೆ ನಾನು ಹೋಗಬೇಕಿತ್ತು. ಆದರೂ ಈ ಪ್ರಯಾಣದಲ್ಲಿ ಅಣ್ಣಾಚ್ಚಿ ನನಗೆ ವಹಿಸಿದ್ದ ವಿಷಯ ಮನಸ್ಸಿನಲ್ಲೇ ಇತ್ತು. ಅವರಿವರೊಂದಿಗೆ ಈ ವಿಷಯ ಮಾತನಾಡಿದ್ದೆ. ಎಲ್ಲಾದರೂ ನನ್ನ ಕೆಲಸ ಆಗಬಹುದೆಂಬ ನಂಬಿಕೆ ಸಹ ಇತ್ತು. ಒಂದು ವೇಳೆ ಯಾವುದಾದರೂ ಒಂದು ಸಿನಿಮಾದಲ್ಲಿ... ಈ ದಿಕ್ಕಿನಲ್ಲೂ ನಾನು ನನ್ನ ಸ್ನೇಹಿತರ ಮೂಲಕ ಪ್ರಯತ್ನ ಮಾಡಿದ್ದೆ.

ಏನೇಆಗಲಿ ನಾನು ನಿರಾಶನಾಗಲಿಲ್ಲ.

ಮನೆಗೆ ಹಿಂದಿರುಗಿ ಬಂದಾಗ ನನ್ನಾಕೆ ಹೇಳಿದಳು,

'ನೀವು ಹೊರಟ ಮಾರನೆಯ ದಿನ ಒಬ್ಬ ಹುಡುಗ ನಿಮ್ಮನ್ನು ಕೇಳಿಕೊಂಡು ಬಂದಿದ್ದನು. ನೀವು ಯಾವಾಗ ಬರುತ್ತೀರೆಂದು ಗೊತ್ತಿಲ್ಲವೆಂದು ಹೇಳಿದೆ. ಮತ್ತೆ ನಿಮ್ಮನ್ನು ಕಾಣಲು ಬರುತ್ತೇನೆಂದು ಹೇಳಿ ಹೋಗಿದ್ದಾನೆ. ಆದರೆ ಅವನು ಮತ್ತೆ ಬರಲೇ ಇಲ್ಲ.'

ನಾನು ಅಂದೇ ಹೋಗಿ ಅಣ್ಣಾಚ್ಚಿಯನ್ನು ಕಂಡೆ. ಅಣ್ಣಾಚ್ಚಿ ಮ್ಲಾನ ವದನನಾಗಿದ್ದನು.

'ಸಾರ್, ಕುಮಾರನ್ ಎಲ್ಲಿಗೋ ಹೊರಟು ಹೋಗಿದ್ದಾನೆಂದು ತೋರುತ್ತಿದೆ. ಇತ್ತೀಚೆಗೆ ಈ ಕಡೆಗೆ ಬಂದೇ ಇಲ್ಲ. ಅವನು ವಾಸವಾಗಿದ್ದ ಕಡೆಯೂ ಹೋಗಿಲ್ಲವಂತೆ. ಎಲ್ಲಿದ್ದಾನೋ ಏನೋ?'

ಅಣ್ಣಾಚ್ಚಿಗೆ ತನ್ನ ಸ್ವಂತ ಮಗ ನಷ್ಟವಾದಂತಾಗಿತ್ತು.

ನನಗೂ ಅದೊಂದು ಆಘಾತವಾದಂತಾಗಿತ್ತು.

ನಾನು ಹೇಳಿದೆ,

'ಇಲ್ಲೇ ಎಲ್ಲಾದರೂ...'

ಅಣ್ಣಾಚ್ಚಿ ಹೇಳಿದನು,

'ಇಲ್ಲ ಸಾರ್, ಇಲ್ಲೆಲ್ಲಾದರೂ ಇದ್ದರೆ ಅವನು ನನ್ನ ಹತ್ತಿರ ಬರದಿರುವುದಿಲ್ಲ. ಬಂದಿದ್ದರೆ ನನ್ನಿಂದ ಸಾಧ್ಯವಾಗುವ ಸಹಾಯವನ್ನು ನಾನು ಖಂಡಿತ ಅವನಿಗೆ ಮಾಡುತ್ತಿದ್ದೆ.'

ಅಣ್ಣಾಚ್ಚಿ ಮತ್ತೆ ತನ್ನೊಂದಿಗೆಂಬಂತೆ ಹೇಳಿದನು–

'ಬಹುಶಃ ಅವನು ಮದ್ರಾಸಿಗೆಲ್ಲೋ ಹೋಗಿರಬೇಕು. ಸಿನಿಮಾ ತೆಗೆಯುವ ದೊಡ್ಡ ಊರಲ್ಲವೇ? ಹೋಗಿ ಹೇಗಾದರೂ ಒಂದು...'

ನನ್ನ ಬಾಯಿಂದ ಮಾತೊಂದೂ ಹೊರಡಲಿಲ್ಲ.

ಇದು ನಡೆದು ಸುಮಾರು ತಿಂಗಳುಗಳೇ ಆಗಿದ್ದವು. ಆಮೇಲೆ ಯಾವಾಗಲಾದರೂ ಅಣ್ಣಾಚ್ಚಿಯನ್ನು ನೋಡಿದಾಗ ಅವನು ಕುಮಾರನ ವಿಷಯವನ್ನೇ ಎತ್ತುತ್ತಿರಲಿಲ್ಲ.

ಹೀಗಿದ್ದಾಗ ನಿನ್ನೆ...

ಇದ್ದಕ್ಕಿದ್ದಂತೆ ಮಳೆ ಶುರುವಾಯಿತು. ನನ್ನ ಕೈಯಲ್ಲಿ ಕೊಡೆ ಇರಲಿಲ್ಲ. ಮಳೆ ನಿಲ್ಲಲೆಂದು ಬಸ್‌ಸ್ಟ್ಯಾಂಡಿನ ಮುಂದಿದ್ದ ಮುಚ್ಚಿದ್ದ ಒಂದು ಅಂಗಡಿಯ ಜಗುಲಿಯಲ್ಲಿ ಹೋಗಿ ಕುಳಿತೆ. ಅಲ್ಲಿ ಬೆಳಕಿರಲಿಲ್ಲ. ದೀಪದ ಕಂಬದ ಬೆಳಕು ಮಧ್ಯೆ ಮಧ್ಯೆ ಆರುತ್ತಿತ್ತು, ಹತ್ತಿಕೊಳ್ಳುತ್ತಿತ್ತು. ಅದೇ ಜಗುಲಿಯ ಮೇಲೆ ಯಾರೋ ಇಬ್ಬರು ಗಂಡಸರು ಕುಳಿತಿದ್ದರು. ಅದರಲ್ಲಿ ಒಬ್ಬನು ಸರ್ದಾರ್‌ಜೀ ಆಗಿದ್ದನು. ಅವನು ಆಗಾಗ್ಗೆ ಆಕಾಶವನ್ನು ನೋಡುತ್ತಾ ಅಸಹನೆಯಿಂದ ಏನೋ